Release of Water from Koyna Project to some parts in Bijapur District

ಶ್ರೀ ಕೆ. ಬಿ. ಪಾಟೀಲ್.— ಬಿಜಾಪುರದ ಕಡೆಗೆ ಕೊಯ್ನಾ ನೀರು ಬರುತ್ತದೆ ಎಂದು ಹೇಳಿದ್ದರೂ ಇದುವರೆಗೆ ಅಲ್ಲಿನ ಜನಕ್ಕೆ ನೀರು ಬರಲಿಲ್ಲ ಮತ್ತು ಇದರ ಬಗ್ಗೆ ಇನ್ನೂ ಸರಿಯಾದ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರಕಾರ ತೀವ್ರವಾಗಿ ಕ್ರಮ ತೆಗೆದುಕೊಂಡು ಇಲ್ಲಿನ ಜನತೆಗೆ ನೀರು ಕೊಡಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.— ಮಾನ್ಯ ಶ್ರೀ ಪಾಟೀಲರವರು ಇಂದು ಬೆಳಗ್ಗೆ ತಾನೇ ಬಿಜಾಪುರದಿಂದ ಬಂದು ಇಲ್ಲಿನ ಸ್ಥಿತಿಯನ್ನು ಕಣ್ಣಾರೆ ನೋಡಿ ಬಂದು ಸರಕಾರದ ಗಮನಕ್ಕೆ ಇಲ್ಲಿ ತರುತ್ತಿದ್ದಾರೆ. ಇಲ್ಲಿ ಪ್ರತಿಯೊಂದು ವಾರ್ಡಿನಲ್ಲೂ ಜನಕ್ಕೆ ಕುಡಿಯುವ ನೀರು ಸಿಗುತ್ತಿಲ್ಲ. ಇಲ್ಲಿದ್ದ ಬಾವಿಗಳಿಗೆ ಪಂಪು ಹಾಕಬೇಕೆಂದು ಇದ್ದರೂ ಅಲ್ಲಿನ ಪಂಪುಗಳು ಕೆಟ್ಟುಹೋಗಿವೆ, ಇಲ್ಲಿನ ಹೆಂಗಸರು ಮಕ್ಕಳು ನೀರಿಗಾಗಿ ಬಹುವಾಗಿ ಪರದಾಡುತ್ತಿದ್ದಾರೆ. ನಮ್ಮ ಪರವಾಗಿ ಬೇಕಾದಷ್ಟು ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ಮಂತ್ರಿಗಳಾದ ಶ್ರೀ ಚನಬಸಪ್ಪನವರು ಹಿಂದೆ ಕೂಡ ಹೇಳಿದ್ದರು. ಆದರೆ ಇಲ್ಲಿನ ಪರಿಸ್ಥಿತಿ ಬಹು ಗಂಭೀರವಾಗಿದೆ. ಇಲ್ಲಿನ ಹೆಂಗಸರು ನೀರಿಗಾಗಿ ಬಾವಿ ಭಳ ದಿನ ಬೆಳಗಾದರೆ ಕಿತ್ತಾಡುತ್ತಿರುವುದನ್ನು ನಾವು ನೋಡುತ್ತ ಬರುತ್ತಿದ್ದೇನೆ, ಇದಕ್ಕೋಸ್ಕರ ನಾವು ತಮ್ಮ ಮೂಲಕ ಸರಕಾರದ ಗಮನ ಸೆಳೆದು ತೀವ್ರವಾದ ಕಾರ್ಯಕ್ರಮ ತೆಗೆದುಕೊಂಡು ಇಲ್ಲಿನ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Statement of the Minister for Public works and Electricity

re : Release of water from Koyna Project

2-00 P. M.

Sri H. M. CHANNABASAPPA (Minister for Public Works).—Madam Speaker, this question is being raised everyday and also the position explained by Government almost everyday. Yesterday, I have made an exhaustive statement on this issue. Subsequently, I have got in touch with the concerned people in Bijapur and the latest position has also been ascertained. It is true that consequent on Krishna River drying up, there has been some difficulty for the water. The capacity of the tank is to provide about 8 million units of water to about 1,05,000 population of Bijapur which works out to about 8 gallons per head.

That is the position in the normal situation. The tank has water. The position today is, the water is muddy and it is not fit for drinking. I have directed them to create settling tanks and pump to the settling tanks so that it may be useful in times of scarcity. The second point is: Now they have sunk Borewells and the aggregate supply from these borewells is of the order of 4 lakh units. This will work out to about 4 gallons per head. There are some pockets where the borewells are not connected by pipes. To those places, Government has made arrangements and they have also been geared up to take water by tankers and deliver to the areas which are devoid of these borewells. Hectic efforts are going on almost on a war-footing and the officers are going ahead with puming of water and connecting pipes to the reservoirs and making the water available through pipes. Such of the areas which cannot be served by the pipe-lines, water is being supplied through tankers. I quite see, in times of scarcity when 8 gallons per head is reduced to 3 gallons per head, there would be some amount of competition and that too when water had to be rationed amongst the people. Whatever possible efforts could be made, Government is prepared to make and they are making to make the water available.

Last night I got in touch with the Deputy Commissioner and the Executive Engineer of Bijapur and have given them instructions that they need not spare any effort; whatever might be the cost, cost is no consideration. they will have to make a provision to make available at least not less than 50 percent of the total water required and ration it properly so that everybody may get the necessary basic requirement of life. Therefore it is not correct to say that Government is not alive to the gravity of the situation. If any hon. member were to give me any suggestion as to how best to tide over the crisis, I have no objection to welcome the suggestion and act upon it. I welcome the suggestions from other members though they may not belong to that district. Water is the basic necessity and Government will not spare any effort in that regard.

Sri J. L. KABADI.—Since the Hon. Minister has agreed to consider our suggestions, I would like to offer a few suggestions in this regard.

Sri H. M. CHANNABASAPPA.—The suggestions could be made to me even outside the House. I shall discuss with the hon. members and try to implement their useful suggestions.

Wage Rates to Labourers at the Upper Krishna Project

ಶ್ರೀ ಬಾಪುಗೌಡರಾಯಪ್ಪ (ಜಹಪೂರ).— ಮಾನ್ಯ ಅಧ್ಯಕ್ಷರೆ, ಕೃಷ್ಣ ಮೇಲ್ದಂಡೆ ಕಾಲುವೆ ಕೆಲಸ ಮಾಡುತ್ತಿರುವ ಕೂಲಿಗಾರರಿಗೆ ಕಡಿಮೆ ಕೂಲಿ ಸಿಗುತ್ತಿದೆ ಎಂದು ನಾವು ಈ ಹಿಂದೆ ಹೇಳಿದಾಗ, ಮಾನ್ಯ ಚನ್ನಬಸಪ್ಪನವರು ಅದನ್ನು ಹೆಚ್ಚು ಮಾಡಲಾಗುತ್ತದೆಂದು ಹೇಳಿದರು. ಮತ್ತು ಆ ಬಗ್ಗೆ ಆರ್ಡರ ಹೊರಡಿಸುತ್ತೇವೆಂದು ಹೇಳಿದರು. ನಾನು ೧೨, ೧೩, ೧೪ನೇ ತಾರೀಖು ನನ್ನ ಮತಕ್ಷೇತ್ರಕ್ಕೆ ಹೋಗಿದ್ದೆ. ಆದರೆ ಅದಿನ್ನೂ ಕಾರ್ಯಗತವಾಗಿಲ್ಲ. ಈಗಲೂ ೭೫ ಪೈಸೆಯಿಂದ ೧೫೦ ಪೈಸೆವರೆಗೆ ಮಾತ್ರ ಕೂಲಿ ಸಿಗುತ್ತಿದೆ. ಮತ್ತು ವಾರಕ್ಕೆ ಒಂದು ಪಾವು ಗೋದಿ ಮಾತ್ರ ಕೊಡುತ್ತಿದ್ದಾರೆ. ಇಂದು ಅಲ್ಲಿ ಸಾವಿರಾರು ಮಂದಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ವಾರಕ್ಕೆ ಒಂದು ಪಾವು ಮಾತ್ರ ಹಂಚಿದರೆ ಮತ್ತು ಕಡಿಮೆ ಕೂಲಿ ಕೊಟ್ಟರೆ ಅವರು ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ತಾಲ್ಲೂಕ ಮಟ್ಟದಲ್ಲಿ ಅಲಾಟ್ ಆಗಿದ್ದು ೩ ಸಾವಿರ ಕ್ವಿಂಟ್‌ಲ ಗೋದಿ ಸಾವಿರ ಕ್ವಿಂಟಾಲ ಮೇಜಿ, ಸಾವಿರ ಕ್ವಿಂಟಾಲ ಮೈಲೊ. ಆದರೆ ಗೋಡೋನನಿಂದ ಲಿಫ್ಟ ಮಾಡುವುದಕ್ಕೆ ಪರವಾನಿಗೆ ಕೊಟ್ಟಿದ್ದು ೨೫೦ ಕ್ವಿಂಟಾಲಿಗೆ ಮಾತ್ರ. ಅಂದರೆ ಅಲಾಟ್ ಮಾಡುವ ಪದ್ಧತಿ ಒಂದಾದರೆ, ಲಿಫ್ಟ್ ಮಾಡುವ ಪದ್ಧತಿ ಇನ್ನೊಂದಾಗಿದೆ. ಇಂದು ಅಲ್ಲಿಗೆ ಅಲಾಟಮೆಂಟ ಮಾಡುತ್ತಿರುವುದಕ್ಕೂ, ಜನರಿಗೆ ಕೊಡುತ್ತಿರುವುದಕ್ಕೂ ಸಂಬಂಧವಿಲ್ಲವಾಗಿದೆ. ಈ ರೀತಿ ಕಡಿಮೆ ರೇಷನ್ ಮತ್ತು ಕಡಿಮೆ ಕೂಲಿ ಕೊಡುತ್ತಿರುವುದರಿಂದ ಅಲ್ಲಿ ಪರಿಸ್ಥಿತಿ ಭೀಕರವಾಗಿದೆ. ಕಲ್ಬುರ್ಗಿ ಜಿಲ್ಲೆಯಲ್ಲ ಈ ಒಂದು ಪರಿಸ್ಥಿತಿ ಉಂಟಾಗಿದೆ. ಕೂಲಿ ಜಾಸ್ತಿ ಮಾಡುವ ಬಗ್ಗೆ ಆರ್ಡರ ಹೊರಡಿಸಲಾಗುವುದೆಂದು ಶ್ರೀ ಮಾನ ಚನ್ನಬಸಪ್ಪನವರು ಮತ್ತು ಮುಖ್ಯ ಮಂತ್ರಿಗಳು ಹೇಳಿದ್ದರೂ ಸಹ ಇನ್ನೂ ಹೊರಡಿಸಿಲ್ಲ. ಅವರು ಹೇಳಿಕೆ ಕೊಟ್ಟು ಒಂದು ತಿಂಗಳಾದರೂ ಸಹ ಅಲ್ಲಿಯ ಅಧಿಕಾರಿಗಳು ನಮಗೆ ಇನ್ನೂ ಆರ್ಡರ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಅಧಿಕಾರಿಗಳು ಈ ವಿಷಯದಲ್ಲಿ ನಿಸ್ಸಹಾಯಕರಾಗಿದ್ದಾರೆ. ಆಹಾರಧಾನ್ಯಗಳು ಸರಿಯಾಗಿ ಬರುತ್ತಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಮಾನ ಚನ್ನಬಸಪ್ಪನವರಲ್ಲಿ ನಾನು ಕೈಜೊಡಿಸಿ ಕೇಳಿಕೊಳ್ಳುವುದೇನೆಂದರೆ ಏನಾದರು, ಹೇಳಿಕೆ ಕೊಡುವಾಗ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಕೊಡಬೇಡಿ ಎಂದು. ಏನಾದರು ಹೇಳಿಕೆ ಕೊಟ್ಟರೆ ಅದರಲ್ಲಿ

೧೨ ಆಣೆ ಕೆಲಸವನ್ನು ಆದರೂ ಮಾಡಿಸಿ. ಅವರಿಗೆ ಹೊಟ್ಟೆಗೆ ಅನ್ನವಿಲ್ಲದಿದ್ದರೆ ಕೆಲಸವನ್ನಾದರೂ ಹೇಗೆ ಮಾಡುತ್ತಾರೆ? ಕೂಲಿ ನೋಡಿದರೆ ೭೫ ಪೈಸೆಯಿಂದ ೧೫೦ ಪೈಸೆವರೆಗೆ ಇದೆ, ಗೋಧಿಯ ಹಂಚಿಕೆ ಸರಿಯಾಗಿಲ್ಲ, ಈ ಎರಡು ಕಾರಣಗಳಿಂದ ಆಲ್ಲಿ ಹಾಹಾಕಾರ ಎದ್ದಿದೆ. ಶ್ರೀಮತಿ ಇ.ಇ.ವಾಜ ಅವರು ಆಲ್ಲಿಗೆ ೫ ಸಾವಿರ ಕ್ವಿಂಟಾಲ ಕೊಡಲಾಗಿದೆ ಎಂದು ಹೇಳಿಕೆ ಕೊಟ್ಟರು. ಆದರೆ ೨೫೦ ಕ್ವಿಂಟಾಲ ಮಾತ್ರ ಕೊಟ್ಟಿರುವುದು. ಪೇಪರನಲ್ಲಿ ಹೇಳಿಕೆ ಕೊಡುವುದು ಒಂದಾದರೆ, ಹಂಚುವುದು ಬೇರೆ ಯಾಗಿದೆ. ಆಲ್ಲಿಗೆ ಸಾಕಷ್ಟು ಆಹಾರವನ್ನು ಲಿಫ್ಟ್ ಮಾಡುವುದಕ್ಕೆ ಆಹಾರವಿಲ್ಲ ಎಂದು ಹೇಳುತ್ತಿದ್ದಾರೆ. ನಿಮ್ಮಲ್ಲಿ ಒಂದುವೇಳೆ ಇಲ್ಲದಿದ್ದರೆ ಇಲ್ಲ ಎಂದು ಹೇಳಿಬಿಡಿ. ಆವರು ಬೇರೆ ಏನಾದರು ಮಾಡಿಕೊಳ್ಳುತಾರೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಹೇಳಿಕೆ ಕೊಡ ಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

†ಶ್ರೀ ವಿಶ್ವನಾಥ ರೆಡ್ಡಿ (ಯಾದಗಿರಿ).— ಮಾನ್ಯ ಅಧ್ಯಕ್ಷರೆ ನಾನು ೧೧ನೇ ತಾರೀಖಿನ ದಿವಸ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಆಲ್ಲಿಯ ಕೂಲಿಗಾರರ ಕೂಲಿಯನ್ನು ಜಾಸ್ತಿ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದರೂ ಸಹ ಇನ್ನೂ ಕಾರ್ಯಗತವಾಗಿಲ್ಲ. ಆ ವಿಷಯವನ್ನು ಸವಿಸ್ತಾರವಾಗಿ ಮಾನ್ಯ ಬಾಪೂಗೌಡರು ಈಗ ಹೇಳಿದರು. ಇಂದು ಅಪ್ಪರ ಕೃಷ್ಣ ಕೆನಾಲ್ ವರ್ಕನಲ್ಲಿ ಕೆಲಸ ಮಾಡಲು ಸಾಕಷ್ಟು ಲೇಬರ್ಸ್ ಬರುತ್ತಿಲ್ಲದಿರುವುದಕ್ಕೆ ಕಾರಣಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆ. ಮತ್ತು ಆ ಬಗ್ಗೆ ಚೀಫ-ಇಂಜಿನಿಯರ ಅವರ ಜೊತೆಯಲ್ಲಿ ಮೀಟಿಂಗ ಮಾಡಿ ಸರಿಪಡಿಸಬೇಕೆಂದು ಸಹ ಹೇಳಿದ್ದೆ. ಆಲ್ಲಿಗೆ ಕೂಲಿಗಾರರು ಸಾಕಷ್ಟು ಪ್ರಮಾಣದಲ್ಲಿ ಬರದ್ದಿರವುದಕ್ಕೆ ಕಾರಣವೆಂದರೆ, ಸಾಕಷ್ಟು ಕೂಲಿ ಸಿಗದಿರುವುದು, ಆಹಾರಧಾನ್ಯ ಸಾಕಷ್ಟು ಸಿಗದಿರುವುದು ಮತ್ತು ಮೆಡಿಕಲ್ ಎಡ್ ಸಿಗದಿರುವುದು. ಇದೆಲ್ಲವನ್ನೂ ಸರಿಪಡಿಸಿದರೆ ೧೦ ರಿಂದ ೨೦ ಸಾವಿರದವರೆಗೆ ಕೂಲಿಗಾರರು ಕೆಲಸ ಮಾಡಲು ಆಲ್ಲಿಗೆ ಬರುತ್ತಾರೆ. ಆದಕಾರಣ ಈ ಬಗ್ಗೆ ಚೀಫ-ಇಂಜಿನಿಯರ ಅವರ ಜೊತೆಯಲ್ಲಿ ಮೀಟಿಂಗ ಮಾಡಿ ತೀವ್ರವಾಪ ಕ್ರಮ ಕೈಕೊಂಡರೆ, ಬೆಂಗಳೂರು ಹಾಗು ಇನ್ನಿತರ ಭಾಗಗಳಿಗೆ ಹೋಗಿರುವ ಜನರನ್ನು ಲಿಫ್ಟ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

Sri H.M.CHANNABASAPPA.— On this issue I do not want to have any difference of opinion with any member of this House. The Hon. Member Sri Bapu Gowda just about 10 minutes back came to me and told me that the orders have not been implemented in regard to raising of the wage rates. At any time had I made an appeal to the House I made it with an assurance that whatever you want the Government to do in this connection, the Government would

certainly do it within the permissible limit. I cannot have any difference of opinion with regard to this matter either with the members of this side or the members of that side. Immediately after he complained about wages on the other day, orders have been issued in pursuance of the assurance made not only on the spot but also on the floor of the House that the payments have to be made in accordance with the enhanced rates. Now, Sri Bapu Gowda brought to my notice it has not been implemented. I am very much surprised myself. I do not want to enter into an argument in this regard with the Hon. Member. If there is any delay in increasing the rate and if there is lapse on the part of the officers to implement it, I can assure the House that I will take drastic action against them, and if the rates assured have not been paid for such a period during which it ought to have been given, back payment will be made. There is no difficulty about it. Let me ascertain what exactly has happened; if it has so happened as Mr. Bapu Gowda has stated, I must find out where exactly the mistake lies and make a statement on this matter by tomorrow at about 1 p.m.

In regard to availability of labour in the Krishna Canal works Sri Viswanatha Reddy complained the people are not coming forward for work because the rates are low. All the workers of that area are being paid Rs. 3/- on average. We have ordered that these people should be paid Rs. 3/- on average and many members bear witness to that and Sri Byre Gowda also was a witness to that the Government was paying that rate of wages to a normal labourer. In spite of that they made representations and further they complained about the cost of blasting materials the labourer has to bear out of his earnings. I did feel that it would be a hard hit if the labourers are made to pay the cost of the blasting materials out of their wages they earn. I straightaway ordered that the cost of blasting materials should not be part of their earnings. I have given orders that 12½ percent over and above what a person earns a week should be given extra to him as the cost of blasting materials. The reason given by the Hon.

Members that people not going to the workspot because the earnings are less than the other places is not correct. Probably the reasons might be that they have to go a little distance for away from their villages and have to live a sort of a secluded life. We are always sympathetic as far as these people are concerned. As Sri Viswanatha Reddy knows that arrangements have been made to shift about 60 to 70 people who had come all along from Gulbarga to Bangalore in search of work. I did not allow grass to grow than the reasonable time and made immediate arrangements to send them to such places where they were willing to go to earn their living. With such earnestness the Government is attending to the problems of these people. Therefore I will have to verify the several factors when the Hon. Members made some charges and make a statement regarding all these matters tomorrow after the question hour.

Any Hon. Member of that area may come to me and discuss with me about these problems and if anything is to be done in the matter, the Government will certainly do it.

ಶ್ರೀ ಬಾಪುಗೌಡ ರಾಯಪ್ಪ.—ಕೃಷ್ಣಾ ಮೇಲ್ದಂಡೆಯ ಕೆನಾಲ್ ಕೆಲಸಕ್ಕೆ ಇವರು ಒಬ್ಬ ಕೂಲಿಗೆ ೩ ರೂಪಾಯಿ ಕೂಲಿಯನ್ನು ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಕೊಟ್ಟಿರುವುದನ್ನು ಅವರೇಜ್ ಲೆಕ್ಕ ತೆಗೆದುಕೊಂಡರೆ ಒಬ್ಬ ಕೂಲಿಗೆ ೧ ರೂಪಾಯಿ ೪೦ ಪೈಸಾ ಬೀಳುತ್ತದೆ.

ಅಧ್ಯಕ್ಷರು.—ಈ ಬಗ್ಗೆ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಾಪುಗೌಡ ರಾಯಪ್ಪ.—ಆರ್ಡರ್ ಮಾಡಿ ಕಳುಹಿಸಿದ್ದೇವೆ ಎಂದು ಹೇಳಿದರು. ಒಂದು ತಿಂಗಳಿಂದ ಏನೂ ಇಲ್ಲ.

ಅಧ್ಯಕ್ಷರು.—ಬರೆದು ಕಳುಹಿಸಿ. ನಾಳೆ ಸ್ಟೇಟ್‌ಮೆಂಟ್ ಕೊಡುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಕಾಮಗಾರಿಗಳಿಗೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಆದರೆ ಆ ಕಾಮಗಾರಿಗಳನ್ನು ಬ್ಯಾನ್ ಮಾಡಿದ್ದಾರೆ. ಆ ಕಾಮಗಾರಿಗಳು ನಡೆಯದೆ ಸ್ಥಗಿತವಾಗಿವೆ. ಆದ್ದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯ ಕೆಲಸ ಕಾರ್ಯಗಳು ನಡೆಯದೇ ಇರುವಾಗ ಆ ಇಲಾಖೆ ಎತಕ್ಕೆ ಇರಬೇಕು? ವಿಧಿನಿಯಮನು ಬದ್ಧವಾಗಿ ಈ ಕೆಲಸ ಕಾರ್ಯಗಳನ್ನು ತೆಗೆದು ಹಾಕಿದೆಯೇ? ಇದರ ಪರಿಸ್ಥಿತಿ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸ

ಬೇಕು. ಇಂಜಿನಿಯರುಗಳಿಗೆ ಕೆಲಸವಿಲ್ಲದೆ ಅವರು ಸುಮ್ಮನೆ ಕುಳಿತುಕೊಂಡಿದ್ದಾರೆ. ಅವರಿಗೆ ಸುಮ್ಮನೆ ಸಂಬಳ ಕೊಡುತ್ತಿದೆ. ನಾವು ಕಂದಾಯ ಕೊಟ್ಟು ಆ ಹಣದಲ್ಲಿ ಅವರಿಗೆ ಸಂಬಳವನ್ನು ಕೊಟ್ಟು ಬಿಳಿ ಆನೆಯನ್ನು ಸಾಕಿದ ಹಾಗಾಗಿದೆ. ಆದ್ದರಿಂದ ತಾವು ಸ್ಪಷ್ಟವಾಗಿ ಹೇಳಬೇಕು. ತಾವು ಬ್ಯಾನನ್ನು ತೆಗೆಯದಿದ್ದರೆ ಕಾಮಗಾರಿಗಳು ನಡೆಯುವುದಿಲ್ಲ. ಇಂಜಿನಿಯರಿಗೆ ಸುಮ್ಮನೆ ಸಂಬಳ ಕೊಡಬೇಕಾಗಿದೆ. ಹೆಂಗಸಿಗೆ ಆಪರೇಷನ್ ಮಾಡಿಸಿ ಗಂಡುಮಗು ಹೆರು ಹೆರು ಎಂದು ಹೇಳಿದ ಹಾಗಾಗಿದೆ. ಈ ಮಾತನ್ನು ಜನ ಸಹಿಸುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಬುಡಕ್ಕೆ ತಂದಿದ್ದಾರೆ. ಈ ಇಲಾಖೆಯಲ್ಲಿ ಕೆಲಸ ಇಲ್ಲ. ಈ ಮಂತ್ರಿಗಳು ಏತಕ್ಕೆ ಇರಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

The position is this. It was true Madam Speaker, that there was a economy order in the month of February 15th and it was interpreted that this was meant to be in operation up to 31st March till the new Budget was presented. There is a misconception that this order in force is meant for certain parts of the State. I have made it amply clear during the budget speech that there is an impression amongst certain members of the old Mysore that there has been some retordation in the development of irrigation works and assured that I will remove by positive action any such impression and I think that this will satisfy the Hon. Members.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಳೆಯ ಮೈಸೂರು ಹಾಳಾಗಿ ಹೋಗುತ್ತಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ಈ ಸಭೆ ಮುಗಿಯುವುದರೊಳಗೆ ಈ ಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು. ಈ ಸರ್ಕಾರ ಬಂದಮೇಲೆ ನೀವು ತಾರತಮ್ಯ ಮಾಡಿದ್ದೀರಿ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಧೈರ್ಯವಾಗಿ ಬಿಚ್ಚು ಮನಸ್ಸಿನಲ್ಲಿ ಈ ಸಭೆ ಮುಗಿಯುವುದರೊಳಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಬಜ್ಜೆಟ್ಟನ್ನು ಸರಿಯಾಗಿ ಓದಿಲ್ಲ ಎಂದು ಕಾಣುತ್ತದೆ. ಅವರು ಬಜ್ಜೆಟ್ಟನ್ನು ಓದಿದರೆ ಅವರಿಗೆ ಆ ವಿಷಯವೆಲ್ಲವೂ ಸರಿಯಾಗಿ ಗೊತ್ತಾಗುತ್ತದೆ.